6

# ಯೋನಾತಾನ

## ಬದಲುಗೊಂಡ ರಾಜನಿಷ್ಠೆ

ಕಾರ್ತೇಜಿನ ವಿರುದ್ಧ ತನ್ನ ನೌಕಾಪಡೆಯನ್ನು ದಾಟಿಸಿಕೊಂಡು ಹೋಗುವ ಆತ್ಮ ವಿಶ್ವಾಸ ಹೇಗೆ ಬಂತು ಎಂದು ಸಿಸಿಲಿಯ ಮುಖ್ಯಸ್ಥನಾದ ಸಿಪಿಯೋನನ್ನು ಒಬ್ಬರು ಪ್ರಶ್ನಿಸಿದರು. ಮೂರು ನೂರು ಶಸ್ತ್ರಸಜ್ಜಿತರಾದ ಶಿಸ್ತಿನ ಸಿಪಾಯಿಗಳನ್ನು ಅವರಿಗೆ ತೋರಿಸಿ, ದಂಡೆಯ ಮೇಲಿನ ಬುರುಜಿನತ್ತ ಬೋಟ್ಟು ಮಾಡಿ ಹೀಗೆ ಹೇಳಿದನು, “ನಾನು ಆಜ್ಞಾಪಿಸಲು ಆ ಬುರುಜಿನ ತುದಿಗೆ ಹೋಗಿ ಕೆಳಗೆ ಧುಮುಕಲು ಹಿಂಜರಿಯದ ಒಬ್ಬನಾದರೂ ಇಲ್ಲಿ ಇಲ್ಲ.” ಸಪಿಯೋ ಮುಂದುವರಿದು, ಬೀಡುಬಿಟ್ಟು, ವೈರಿಯ ಪಾಳೆ ಯವನ್ನು ಸುಟ್ಟುಬಿಟ್ಟರು. ಕಾರ್ತೇಜಿನವರು ತಮ್ಮ ನೌಕೆಗಳನ್ನು ಶರಣು ಮಾಡಿ, ಆನೆಗಳನ್ನೂ ಮತ್ತು ಹಣವನ್ನೂ ಕೊಡುವದಕ್ಕೆ ಒಪ್ಪಿಕೊಂಡರು. ಯಾವ ಪ್ರಶ್ನೆಗಳಿಲ್ಲದ ಸ್ವಾಮಿನಿಷ್ಠೆಯುಳ್ಳ ಸೇನೆ ಅವರಿಗೆ ಜಯ ಕೊಟ್ಟಿತು.

ಈ ಕತೆಯಲ್ಲಿನ ಒಂದು ಮುಖ್ಯ ಅಂಶ ಯೋನಾತಾನನ ಜೀವನದಲ್ಲಿಯೂ ಎದ್ದು ಕಂಡಿತು - *ರಾಜನಿಷ್ಠೆ.* 1 ಸಮುವೇಲ ಪುಸ್ತಕದಲ್ಲಿನ ಸಮಾನ್ಯವಾದ ವ್ಯಕ್ತಿಗಳಲ್ಲಿ ಇವನೂ ಒಬ್ಬನು. ಅವನು ಸೌಲನ ಹಿರಿ ಮಗನು, ರಾಜಪುತ್ರ. ಯೋನಾತಾನನಲ್ಲಿ ಶ್ರೇಷ್ಠ ಗುಣಗಳನ್ನು ಕಾಣಬಹುದು - ಭಯವಿಲ್ಲದ ಯೋಧ, ತನ್ನ ಸೇನೆಯಿಂದ ರಾಜನಿಷ್ಠೆಯನ್ನು ಪಡೆದ ಒಬ್ಬ ಸೇನಾಪತಿ, ಮಾನವ ಪ್ರೀತಿಯ ಶ್ರೇಷ್ಠ ಗುಣವನ್ನು ವ್ಯಕ್ತಪಡಿಸಿದ ಒಬ್ಬ ಸ್ನೇಹಿತ, ದೇವರಲ್ಲಿ ಅತ್ಯದ್ಭುತವಾದ ನಂಬಿಕೆ ಒಬ್ಬ ವ್ಯಕ್ತಿ, ಪರಿಶುದ್ಧ ಜೀವನ ನಡೆಸಿದವನು ಮತ್ತು ತಾನು ಗಮನಿಸಿದ ಎಲ್ಲಾ ತಪ್ಪುಗಳನ್ನು ಸರಿಪಡಿಸುವದಕ್ಕೆ ಹೋರಾಡಿದವನು ಅವನ ಪ್ರಕಾಶಮನವಾದ ಗುಣವು ಅವನ ತಂದೆಯಿಂದ ವಿಭಿನ್ನವಾಗಿತ್ತು.

### ಅವನ ರಾಜನಿಷ್ಠೆ

ರಾಜನಿಷ್ಠೆಗೆ ಬದ್ಧತೆಯನ್ನು ಅಪೇಕ್ಷಿಸುವ ದೇವರ ಆಜ್ಞೆಗಳನ್ನು ಯೋನಾತಾನನು ಅರಿತಿದ್ದನು (ವಿಮೋಚನಕಾಂಡ 22:28; ಅರಣ್ಯಕಾಂಡ 27:20; ಧರ್ಮೋಪದೇಶ ಕಾಂಡ 7:9; ಜ್ಞಾನೋಕ್ತಿ 24:21; ಇತ್ಯಾದಿ.). ಈ ವಿಷಯಗಳಲ್ಲಿ ದೇವರ ಚಿತ್ತವನ್ನು ಅನುಸರಿಸುವದರಲ್ಲಿ ಎಚ್ಚರವಹಿಸಿದನು. ಅವನ ಸ್ವಾಮಿನಿಷ್ಠೆಯು ಪ್ರಧಾನವಾಗಿ ಕಾಣುವ ಮೂರು ಕ್ಷೇತ್ರಗಳು.

#### ದೇವರಿಗೆ ರಾಜನಿಷ್ಠೆ (14:45)

ಯೋನಾತಾನನ ಕುರಿತು ನಾವು ಗಮನಿಸುವ ಮೊದಲ ಉಲ್ಲೇಖದಲ್ಲಿ, ದೇವರೊಂದಿಗೆ ಒಡನಾಟವಿರುವ ಮತ್ತು ಸರ್ವಶಕ್ತನಲ್ಲಿ ಭರವಸೆಯಿರುವ ಒಬ್ಬ ವ್ಯಕ್ತಿಯಂತೆ ನೋಡುತ್ತೇವೆ. 1 ಸಮುವೇಲ 14:6ರಲ್ಲಿ ಹೇಳುವಂತೆ, ಯೋನಾತಾನನು ತನ್ನ ಆಯುಧಗಳನ್ನು ಹೊರುವವನಿಗೆ, “ಸುನ್ನತಿಯಿಲ್ಲದ ಈ ಕಾವಲುದಂಡಿನವರಿಗೆ ವಿರೋಧವಾಗಿ ಹೋಗೋಣ ಬಾ; ಒಂದು ವೇಳೆ ಯೆಹೋವನು ತಾನೇ ನಮಗೋಸ್ಕರ ಕಾರ್ಯ ನಡಿಸುವನು. ಬಹುಜನರಿಂದಾದರೂ, ಸ್ವಲ್ಪ ಜನರಿಂದಾದರೂ ರಕ್ಷಿಸುವದು ಯೆಹೋವನಿಗೆ ಅಸಾಧ್ಯವಲ್ಲ.” ದೇವರಲ್ಲಿ ಯೋನಾತನನ ನಂಬಿಕೆ ಸ್ಥಿರವಾಗಿತ್ತು (14:12ಬ).

ದೇವರ ವಿಷಯದಲ್ಲಿನ ರಾಜನಿಷ್ಠೆಯು 1 ಸಮುವೇಲ ಪುಸ್ತಕದ ಅನೇಕ ಭಾಗಗಳಲ್ಲಿ ವ್ಯಕ್ತವಾಗಿದೆ. ಗತ್ ಊರಿನ ದೈತ್ಯನನ್ನು ದಾವೀದನು ಕೊಲ್ಲುವದನ್ನು ಯೋನಾತಾನನು ಮತ್ತು ಸೌಲನು ನೋಡಿದಾಗ, ದೇವರ ಹಸ್ತವನ್ನು ಯೋನಾತಾನನು ಕಂಡನು (19:5). ಸೌಲನು ಹೊಟ್ಟೇಕಿಚ್ಚಿನಿಂದಾಗಿ ಯೋನಾತಾನ ಮತ್ತು ದಾವೀದನನ್ನು ಬೇರ್ಪಡುವದಕ್ಕಿದ್ದರು. ದೇವರು ತಮ್ಮ ಜೊತೆಗಿದ್ದಾನೆಂದು ಅರಿತು, ತನ್ನ ದುಃಖದಲ್ಲಿಯೂ ಆದರಣೆಯನ್ನು ಪಡೆದನು (20:42). ಇಬ್ಬರೂ ಸ್ನೇಹಿತರು ಕೊನೆಯ ಬಾರಿ ಬೇಟಿಯಾದಾಗ, ಅಲ್ಲಿ ಯೋನಾತಾನನ ನಂಬಿಕೆಯು ಎದ್ದು ಕಾಣುತ್ತಿತ್ತು (23:16). ಯೋನಾತಾನನ ನಂಬಿಕೆಯು ದಾವೀದನಿಗೆ ಬಲನೀಡಿತು.

ಈ ನಿಜಾಂಶಗಳು ಯೋನಾತಾನನನ್ನು ಒಬ್ಬ ಉನ್ನತವಾದ ವಿಶ್ವಾಸಿಯಾಗಿ ಪರಿಚಯ ಮಾಡಿಸುತ್ತವೆ. ದೇವರಲ್ಲಿನ ನಂಬಿಕೆಯ ಮೂಲಕ ಅವನು ಭೂಲೋಕದ ವಿರಸ, ದುಃಖ ಮತ್ತು ಖಿನ್ನತೆಯಿಂದ ಉನ್ನತಕ್ಕೇರಿನು! ದೇವರ ಉದ್ದೇಶ ಮತ್ತು ಯೋಜನೆಗಳಲ್ಲಿ ತಾನೊಂದು ಸಾಧನವಾಗಬೇಕೆಂದು ಯೋನಾತಾನನು ಬಯಸಿದನು. ಅವನು ತನ್ನಲ್ಲಿ ಅಲ್ಪ ನಂಬಿಕೆಯಿಟ್ಟು, ದೇವರಲ್ಲಿ ಅಪಾರವಾದ ವಿಶ್ವಾಸವಿಟ್ಟಿದ್ದನು. ದೇವರ ಬಲದ ಮೇಲೆ ಅವನು ಅವಲಂಭಿಸಿದ್ದರಿಂದ ಯಶಸ್ವಿಯಾದನು (cf. ಮಾರ್ಕ 11:24).

ದೇವರ ವಿಷಯದಲ್ಲಿ ಅವನ ರಾಜನಿಷ್ಠೆಯನ್ನು ವಿವರಿಸುವದಾದರೆ, ಈ ಹೇಳಿಕೆಗಿಂತ ಮಿಗಿಲಾದದ್ದು ಬೇರೊಂದಿಲ್ಲ - "ಅವನು ದೇವರೊಂದಿಗೆ ಕೆಲಸ ಮಾಡಿದನು!" (14:45ಬಿ).

### ಒಬ್ಬ ಸ್ನೇಹಿತನಾಗಿ ರಾಜನಿಷ್ಠೆ (18:1)

ಯೋನಾತಾನ ಮತ್ತು ದಾವೀದ ಇಬ್ಬರೂ ಸ್ಥಿರವಾದ ಮತ್ತು ಬದ್ಧವಾದ ಸ್ನೇಹವನ್ನು ಹಂಚಿಕೊಂಡಿದ್ದರು (18:3, 4). ಈ ಸ್ನೇಹದ ಒಡಂಬಡಿಕೆಯು ತಮ್ಮ ಬಟ್ಟೆಗಳನ್ನು ಒಬ್ಬರಿಗೊಬ್ಬರು ಕೊಡುವದರ ಮೂಲಕ ದೃಢೀಕರಿಸಲ್ಪಟ್ಟಿತ್ತು. ಇದು ಒಬ್ಬರಿಗೊಬ್ಬರು ಒಂದಾಗುವದನ್ನು ಚಿತ್ರಿಸುತ್ತದೆ. ಯೋನಾತಾನನೊಂದಿಗೆ ಯಾರಾದರೂ ಯುದ್ಧ ಮಾಡಿದರೆ, ಅದು ನಿಜವಾಗಿಯೂ ದಾವೀದನೊಂದಿಗೆ ಯುದ್ಧ ಮಾಡಿದಂತಿತ್ತು; ದಾವೀದನೊಂದಿಗೆ ಯಾರಾ ದರೂ ಯುದ್ಧ ಮಾಡಿದರೆ, ಅದು ನಿಜವಾಗಿಯೂ ಯೋನಾತಾನನೊಂದಿಗೆ ಯುದ್ಧ ಮಾಡಿದಂತಿತ್ತು. ಈ ಒಡಂಬಡಿಕೆಯು ಇಬ್ಬರು ಸ್ನೇಹಿ ತರ ಮಧ್ಯದಲ್ಲಿನ ಶ್ರೇಷ್ಠವಾದ ಬಂಧನವಾಗಿತ್ತು.

ತಾನು ಅರಸನಾಗಿ ಎಂದಿಗೂ ಅಧಿಕಾರವಹಿಸುವದಿಲ್ಲವೆಂದು ಯೋನಾತಾನನಿಗೆ ತಿಳಿದಿದ್ದರೂ (23:17), ಅವನಲ್ಲಿ ಹೊಟ್ಟೆಕಿಚ್ಚು ಎಳೆಯಾದರೂ ಇರಲಿಲ್ಲ. ದಾವೀದನ ವಿಷಯದಲ್ಲಿದ್ದ ಅವನ ರಾಜನಿಷ್ಠೆಯು ತನ್ನ ಸ್ನೇಹಿತನಿಗೋಸ್ಕರ ಒಳ್ಳೇದನ್ನೇ ಬಯಸಿತು. ವಾಸ್ತವಿಕವಾದ ಸ್ನೇಹವು ತ್ಯಾಗದ ಗುಣವನ್ನು ಹೊಂದಿರುತ್ತದೆಂದು ಯೋನಾತಾನನು ನಮಗೆ ತೋರಿಸುತ್ತಾನೆ.

ಯೋನಾತಾನನ ಸ್ನೇಹವು, ನೈಜ ಸ್ನೇಹವು ಈ ಕೆಳಗಿನ ಗುಣದಿಂದ ತುಂಬಿತ್ತು: "ಆನಂದ" (19:1, "ಭಕ್ತಿ"; NEB); ಪ್ರಾಮಾಣಿಕತೆ (20:9); ಬದ್ಧವಾದ ಪ್ರೀತಿ (20:42; 2 ಸಮುವೇಲ 1:26); ಉತ್ತೇಜಿಸುವ ಮತ್ತು ಬಲಪಡಿಸುವ (23:16).

ಕೀರ್ತನೆ 133ನ್ನು ಓದುವಾಗ, ಯೋನಾತನ ಮತ್ತು ದಾವೀದರ ಮಧ್ಯದಲ್ಲಿದ್ದ ಸುಂದರವಾದ ಸ್ನೇಹವನ್ನು ನೆನಪಿಸುತ್ತದೆ. ಕೆಳಗೆ ನಮೂದಿಸಿದ ಐತಿಹಾಸಿಕ ಘಟನೆಯು ಈ ಸ್ನೇಹದ ಬಂಧನವನ್ನು ವಿವರಿಸುತ್ತದೆ. ಗ್ರೀಕ್ ಇತಿಹಾಸದಲ್ಲಿ ಎಪಮಿನೊಂಡಾಸ್ ಮತ್ತು ಪೆಲೊಪಿಡಾಸ್‌ರ ಸ್ನೇಹವನ್ನು ವಿವರಿಸುತ್ತದೆ. ಮನ್‌ಟಿನಿಯಾದ ಯುದ್ಧದಲ್ಲಿ, ತಮ್ಮ ಗುರಾಣಿಗಳನ್ನು ಒತ್ತಿ ಹಿಡಿದು ವೈರಿಗಳನ್ನು ಹಿಮ್ಮೆಟ್ಟಿ, ಪೆಲೊಪಿಡಾಸ್ ಅನೇಕ ಗಾಯಗಳಿಂದ ರಕ್ತಸಿಕ್ತನಾಗಿ ಬೀಳುವವರೆಗೆ ಕಾದಾಡಿದರು. ಎಪಮಿನೊಂಡಾಸ್, ತನ್ನ

ಸ್ನೇಹಿತ ಸತ್ತು ಹೋಗಿದ್ದಾನೆಂದು ನೆನೆಸಿ ಅವನ ದೇಹವನ್ನು ಅಲ್ಲಿಯೇ ಬಿಟ್ಟು ಹೋಗದೇ ತಾನೂ ಸಾಯುವದಕ್ಕೆ ಸಿದ್ಧನಾದನು. ತಾನು ಬಹಳವಾಗಿ ಗಾಯಗೊಂಡರೂ, ನೆರವು ಬಂದು ಇಬ್ಬರನ್ನೂ ರಕ್ಷಿಸುವವರೆಗೂ ಕಾಳಗವನ್ನು ಮುಂದುವರಿಸಿದನು. ಆ ದಿನದಿಂದ ಅವರ ಸ್ನೇಹವು ಗಾಡ ಮಾತಾಯಿತು. ಥೆಬಿಯದ ಸೇನೆಯ ಸೇನಾಪತಿಗಳಾಗಿ ಇಬ್ಬರೂ ನೇಮಕಗೊಂಡರು. ಒಂದೇ ಪದವಿ ಮತ್ತು ಅಧಿಕಾರ, ಅವರು ಜೀವದಿಂದಿರುವವರೆಗೂ ಯಾವ ವೈಮನಸ್ಸಾಗಲಿ ಅಥವಾ ವೈರತ್ವವಾಗಲಿ ಅವರಿಬ್ಬರ ಮಧ್ಯವಿರಲಿಲ್ಲ. (Cf. ಜ್ಞಾನೋಕ್ತಿ 17:17ಎ; 18:24ಬಿ.)

**ಒಬ್ಬ ಮಗನಾಗಿ ರಾಜನಿಷ್ಠೆ (2 ಸಮುವೇಲ 1:23)**

ಯೋನಾತಾನನ ಈ ರಾಜನಿಷ್ಠೆಯು ಗ್ರಹಿಸಲಾರದ ವಿರಸಕ್ಕೆ ನಡೆಸಿತು. ಇಸ್ರಾಯೇಲಿನ ಮುಂದಿನ ಅರಸನಾಗಿ ದಾವೀದನನ್ನು ದೇವರು ನೇಮಿಸಿದ್ದಾನೆಂದು ಅವನು ಅರಿತಿದ್ದನು. ದೇವರ ವಿಷಯದಲ್ಲಿನ ರಾಜನಿಷ್ಠೆಯು ದಾವೀದನನ್ನು ಬೆಂಬಲಿಸುವಂತೆ ನಡೆಸಿತು (23:17). ದಾವೀದನೊಂದಿಗಿನ ಅವನ ಸ್ನೇಹವು, ಸೌಲನ ದುಷ್ಟ ಯೋಜನೆಗಳಿಗೆ ಸಹಕರಿಸದೇ ದಾವೀದನೊಂದಿಗೆ ನಂಬಿಗಸ್ತನಾಗಿರುವದಕ್ಕೆ ಕರೆಯಿತು (20:2, 9; 23:17). ಆದರೆ ತನ್ನ ತಂದೆಯ ಕುರಿತಾದ ರಾಜನಿಷ್ಠೆಯು ಸೌಲನನ್ನು ಬೆಂಬಲಿಸಲು ಒತ್ತಾಯಿಸಿತು! ಅವನ ಎಳೆ ಹೃದಯವು ಈ ವಿರಸಗಳನ್ನು ತೂಗಿ ನೋಡಿ ನಿರ್ಧರಿಸಬೇಕಾಯಿತು. ಅವನು “ಮೊಟ್ಟೆಯ ಮೇಲೆ ನಡೆಯುವವನಾಗಿ” ತೋರಿಬಂದನು. ಇಲ್ಲವೇ, ಅವನು ಅದ್ಭುತವಾದ “ಚಮತ್ಕಾರದ ಕೌಶಲ್ಯವನ್ನು” ಆಡಿದನೆಂದು ನೀವು ಹೇಳಬಹುದು!

ಯೋನಾತಾನನು ಸೌಲನ ಜೊತೆಗೆ ಉಳಿದನು. ಅವನು ತನ್ನ ತಂದೆಗೆ ನಿಷ್ಠೆಯಿಂದ ಇದ್ದನು, ಆದರೆ ದೇವರು ಮತ್ತು ದಾವೀದನಿಗೂ ನಿಷ್ಠೆಯಿಂದ ನಡೆಕೊಂಡನು (23:16, 17). ಸೌಲನ ಪ್ರಾರಂಭದ ದಿನಗಳಲ್ಲಿ, ಯೋನಾತಾನನಿಗೆ ತನ್ನ ತಂದೆಗೆ ನಿಷ್ಠೆಯಿಂದ ನಡೆಕೊಳ್ಳುವದು ಕಷ್ಟವೆಂದೆನಿಸಲಿಲ್ಲ. ಸೌಲನು ದೇವರೊಂದಿಗೆ ಅನ್ಯೋನ್ಯವಾಗಿದ್ದಾನೆಂದು ಯೋನಾತಾನನಿಗೆ ತಿಳಿದಿತ್ತು. ಆದರೆ ಸೌಲನ ಪ್ರತಿಭಟನೆ ಕಾಣಿಸಿಕೊಂಡಾಗ, ದೇವರು ಅರಸನಿಂದ ದೂರವಾದನು ಮತ್ತು ದುರಾತ್ಮವು ಆಳತೊಡಗಿತು. ಸೌಲನ ಮಹಾ ಪ್ರಕೋಪದ ಸಮಯಗಳಲ್ಲಿ ಯೋನಾತಾನನು ತನ್ನ ತಂದೆಯ ಜೊತೆಗಿದ್ದನು. ಆ ದುಷ್ಟಪರಿಣಾಮವನ್ನು ಸರಿಪಡಿಸಬಹುದೆಂದು ಅವನು ಬಹುಶಃ ನೆನೆಸಿದನು. ಅವನ ಆಯ್ಕೆಯು ಕಠಿಣವಾದ ಪರೀಕ್ಷೆಯನ್ನು ತಂದಿತು, ಆದರೆ ಯೋನಾತಾನನು ತನ್ನ ಆಯ್ದುಕೊಂಡ ಮಾರ್ಗದಿಂದ ಹಿಂತೆಗೆಯಲಿಲ್ಲ (20:30-33).

ಸೌಲನು ಗಿಲ್ಬೋವದ ಬೆಟ್ಟಕ್ಕೆ ಸೇನೆಯೊಂದಿಗೆ ಪ್ರಯಾಣ ಮಾಡುವಾಗ ಯೋನಾತಾನನು ಅವನೊಂದಿಗಿದ್ದನು. ಆ ಬೆಟ್ಟದ ಮೇಲೆ ತಂದೆ ಮತ್ತು ಮಗನು ಒಟ್ಟಾಗಿ ತೀರಿಹೋದರು.

ಮಕ್ಕಳು ಪಿತೃಗಳಿಗೆ ನಿಷ್ಠೆಯಿಂದ ಇರಬೇಕೆಂದು ದೇವರ ಸ್ಪಷ್ಟವಾದ ಆಜ್ಞೆ ಇದೆ (ಯಾಜಕಕಾಂಡ 20:9; ವಿಮೋಚನ ಕಾಂಡ 20:12; ಇತ್ಯಾದಿ.). ಯೋನಾತಾನಂತೆ ಯಾವ ಮಕ್ಕಳು ತಂದೆ ತಾಯಿಗಳಿಗೆ ನಿಷ್ಠೆಯಿಂದ ನಡಕೊಳ್ಳುತ್ತಾರೋ ಅವರು ಆಶೀ ರ್ವಾದ ಹೊಂದುವರು. ದೇವರಿಗೆ ಮತ್ತು ತಂದೆತಾಯಿಗಳಿಗೆ ನಿಷ್ಠೆ ತೋರಿಸುವದರಲ್ಲಿ ಭಿನ್ನಾಭಿಪ್ರಾಯ ಬರುವಾಗ ದೇವರನ್ನು ಆಯ್ದುಕೊಳ್ಳುವದು ಉತ್ತಮ. ಎಷ್ಟೇ ನೋವಾ ದರೂ ಸರಿಯೇ! (ಮಾತ್ತಾಯ 10:34-39).

## ರಾಜ ನಿಷ್ಠೆಯ ಪಾಠಗಳು

*ದೇವರಿಗೆ ನಿಷ್ಠೆಯಿಂದಿರುವದು ಸರ್ವೋತ್ಕೃಷ್ಟವಾದದ್ದು.* ದೇವರಿಗೆ ನಿಷ್ಠೆಯಿಂದ ನಡಕೊಳ್ಳುವದು ನಮ್ಮ ಹೃದಯಗಳಲ್ಲಿ ಬರೆಯಲ್ಪಡಬೇಕು ಮತ್ತು ಯಾವುದೇ

ಸಂದರ್ಭಗಳಲ್ಲಿ ನಮ್ಮ ಜೀವನ ಶೈಲಿಯಲ್ಲಿ ಅಳವಡಿಸಬೇಕು! ಕ್ರಿಸ್ತ ನಂಬಿಕೆಯನ್ನು ಅಲ್ಲಗಳೆಯುವಂತೆ, ಬಿಷಪ್ ಬಾನರ್ ಅವರು ಜಾನ ಆಡ್ಲಿಗೆ ಸುಡುಗಂಬದಲ್ಲಿ ಸುಡಲ್ಪಡುವಾಗ ಆಗುವ ವೇದನೆಯನ್ನು ವಿವರಿಸಿದರು. ಆಗ ಜಾನ್ ಆಡ್ಲಿಯವರು ಹೀಗೆ ನುಡಿದರು - "ನನ್ನ ತಲೆಯಲ್ಲಿರುವ ಕೂದಲುಗಳ ಸಂಖ್ಯೆಯಷ್ಟು ನನ್ನ ಜೀವಮಾನ ಕಾಲಗಳಿದ್ದರೆ, ನಾನು ಕ್ರಿಸ್ತನನ್ನು ಅಲ್ಲಗಳೆಯುವದಕ್ಕಿಂತ ಮೊದಲು ಅವುಗಳನ್ನು ಬೆಂಕಿಯಲ್ಲಿ ಸುಡಿಸಿಕೊಳ್ಳುತ್ತಿದ್ದೆನು." (Cf. ಕೀರ್ತನೆ 18:1; 91:14; ವಿಮೋಚನಕಾಂಡ 22:28.) ದೇವರಿಗೆ ನಿಷ್ಠೆಯಿಂದ ನಡಕೊಳ್ಳುವ ಕುರಿತು ಯುದ್ಧದಲ್ಲಿ ನಗಾರಿ ಬಾರಿಸುವ ಒಬ್ಬ ಹುಡುಗನ ಕತೆಯಿಂದ ತಿಳಿದುಕೊಳ್ಳಬಹುದು. ಅವನು ಚಳಿಗಾಲದ ಪ್ರಯಾಣದ ಸಂಕಷ್ಟಗಳ ಕುರಿತು ತನ್ನ ಮನೆಗೆ ಪತ್ರ ಬರೆದನು - ಕನಿಕರವಿಲ್ಲದೇ ಕೊರೆಯುವ ತಣ್ಣಗೆ ಬೀಸುವ ಗಾಳಿ. ಹಸಿವೆ ಮತ್ತು ಅವರು ಅನುಭವಿಸಿದ ಬೆತ್ತಲೆತನ. ಮುಕ್ತಾಯದಲ್ಲಿ ಅವನು ಹೀಗೆ ಬರೆದನು: "ಆದರೆ ಅಮ್ಮಾ, ಅದು ನಮ್ಮ ಕರ್ತವ್ಯ. ನಮ್ಮ ಕರ್ತವ್ಯಕ್ಕಾಗಿ ನಾವು ಸಾಯಲೂ ಸಿದ್ಧರು." ದೇವರೊಂದಿಗಿನ ನಮ್ಮ ಸಂಬಂಧದಲ್ಲಿ ಇಂಥ ನಿಷ್ಠೆ ಎದ್ದು ಕಾಣಬೇಕು.

*ಕುಟುಂಬ ಮತ್ತು ಸ್ನೇಹಿತರಿಗೆ ತೋರುವ ನಿಷ್ಠೆಯು ತಪ್ಪನ್ನು ಎಂದಿಗೂ ಒಪ್ಪುವದಿಲ್ಲ. ಅದು ಯಾವಾಗಲೂ ಅದನ್ನು ಎದುರಿಸುತ್ತದೆ!* ಯೋನಾತಾನನು ಸೌಲನನ್ನು ಪ್ರೀತಿಸಿದನು ಮತ್ತು ಪ್ರಶ್ನೆಗಳಿಲ್ಲದೇ ಅವನಿಗೆ ನಿಷ್ಠೆಯಿಂದ ನಡಕೊಂಡನು. ಆದರೆಆ ಪ್ರೀತಿಯು ಅವನನ್ನು ಮೌನವಾಗಿರಲು ಕೊಡಲಿಲ್ಲ. ಅವನು ನ್ಯಾಯ, ನೀತಿಮತ್ತು ಸತ್ಯಗಳ ಕುರಿತು ಮಾತಾಡಲೇ ಬೇಕಾಯಿತು! (19:1-36; 20:30-33). ನಮ್ಮ ಕುಟುಂಬದವರು ಅಥವಾ ಪ್ರಿಯ ಸ್ನೇಹಿತರು ತಪ್ಪುವಾಗ ಮತ್ತು ತಿದ್ದುವಿಕೆಯ ಅವಶ್ಯಕತೆ ಇರುವಾಗ, ನಮ್ಮ ಜೀವನದಲ್ಲಿ, ನಾವು ಸುಮ್ಮನ್ನೆ ಕುಳಿತುಕೊಳ್ಳುವದು ಸುಲಭ. "ನಾನು ಏನೂ ಹೇಳಲು ಸಾಧ್ಯವಿಲ್ಲ" ಎಂದು ಹೇಳುತ್ತೇವೆ. ಅಂಥ ಭಾವನೆ ಸರಿಯಲ್ಲ! (ಜ್ಞಾನೋಕ್ತಿ 27:6, 9, 17; ಗಲಾತ್ಯ 4:16).

*ಒಬ್ಬ ಭಯಭಕ್ತಿಯ ಸ್ನೇಹಿತನನ್ನು ಮರಣವು ಆವರಿಸಿದಾಗ, ಅವನ ವಿಷಯದಲ್ಲಿ ನಿಷ್ಠೆಯು ಸುಂದರ ನೆನಪುಗಳನ್ನು ಮರುಕಳಿಸುತ್ತದೆ.* 2 ಸಮುವೇಲ 1:19-27ರ ಮಾತುಗಳು ಯೋನಾತಾನನ ನೆನಪುಗಳನ್ನು ಹೊರತಂದಿತು:

> ಇಸ್ರಾಯೇಲ್ಯರೇ, ನಿಮ್ಮ ವೈಭವವು ನಿಮ್ಮ ಗುಡ್ಡಗಳಲ್ಲಿ ಮಣ್ಣು ಪಾಲಾಗಿ ಹೋಯಿತು. ಅಯ್ಯೋ, ಪರಾಕ್ರಮಶಾಲಿಗಳೇ, ಹೇಗೆ ಹತರಾದಿರಿ! ಈ ಸಂಗತಿಯನ್ನು ಗತ್ ಊರಿನಲ್ಲಿ ತಿಳಿಸಬೇಡಿರಿ; ಅಷ್ಕೆಲೋನಿನ ಬೀದಿಗಳಲ್ಲಿ ಸಾರಬೇಡಿರಿ. ಫಿಲಿಷ್ಟಿಯರ ಹೆಂಗಸರು ಸಂತೋಷಿಸಾರು; ಸುನ್ನತಿಯಿಲ್ಲದವರ ಸ್ತ್ರೀಯರು ಉಲ್ಲಾಸಿಸಾರು. ಗಿಲ್ಬೋವಗುಡ್ಡಗಳೇ, ನಿಮ್ಮ ಮೇಲೆ ಮಂಜೂ ಮಳೆಯೂ ನೈವೇದ್ಯಕ್ಕಾಗಿ ಫಲಿಸುವ ಹೊಲಗಳು ಇಲ್ಲದೇ ಹೋಗಲಿ; ಅಲ್ಲಿ ಪರಾಕ್ರಮಶಾಲಿಗಳ ಗುರಾಣಿಗಳು ಬಿದ್ದಿರುತ್ತವೆ. ಸೌಲನ ಗುರಾಣಿಯೂ ಅಭಿಷಿಕ್ತನಲ್ಲದವನ ಗುರಾಣಿಯಂತೆ ಬಿದ್ದಿದೆ. ಯೋನಾತಾನನ ಬಿಲ್ಲು ಹತರಾದವರ ರಕ್ತವನ್ನು ಹೀರದೆಯೂ ಪರಾಕ್ರಮಶಾಲಿಗಳ ಕೊಬ್ಬನ್ನು ಭುಂಜಿಸದೆಯೂ ಬರುತ್ತಿರಲಿಲ್ಲ. ಸೌಲನ ಕತ್ತಿಯ ವ್ಯರ್ಥವಾಗಿಯೂ ಹಿಂದಿರುಗುತ್ತಿರಲಿಲ್ಲ. ಸೌಲ ಯೋನಾತಾನರು ಪ್ರಿಯರೂ ಮನೋಹರರೂ ಆಗಿದ್ದರು; ಅವರು ಜೀವಿಸುವಾಗಲೂ ಸಾಯು ವಾಗಲೂ ಆಗಲಿದವರಲ್ಲ. ಅವರು ಹದ್ದುಗಳಿಗಿಂತಲೂ ವೇಗವುಳ್ಳವರು; ಸಿಂಹಗಳಿಗಿಂತಲೂ ಬಲವುಳ್ಳವರು. ಇಸ್ರಾಯೇಲ್ ಸ್ತ್ರೀಯರೇ, ಸೌಲನಿಗಾಗಿ ಗೋಳಾಡಿರಿ; ನಿಮಗೆ ಉಲ್ಲಾಸಕರವಾದ ರಕ್ತಾಂಬರಗಳನ್ನು ಉಡಿಸಿ ಅವುಗಳ ಮೇಲೆ ಸುವರ್ಣಾಭರಣಗಳನ್ನು ತೊಡಿಸಿದವನು ಆತನೇ ಅಲ್ಲವೋ? ಅಯ್ಯೋ, ಪರಾಕ್ರಮಶಾಲಿಗಳೇ, ಯುದ್ಧ ದಲ್ಲಿ ಹೇಗೆ ಮಡಿದು ಹೋದಿರಿ! ಯೋನಾತಾನನು ನಿಮ್ಮ ಬೆಟ್ಟಗಳಲ್ಲಿ ಹತನಾಗಿ ಬಿದ್ದಿದ್ದಾನಲ್ಲಾ. ಯೋನಾತಾನನೇ, ನನ್ನ ಸಹೋದರನೇ, ನಿನಗೋಸ್ಕರ ನನ್ನಲ್ಲಿ ಬಹು ಸಂಕಟವುಂಟಾಗಿದೆ; ನೀನು ನನಗೆ ಬಹು ಮನೋಹರನಾಗಿದ್ದಿ. ನನ್ನ ಮೇಲಿದ್ದ ನಿನ್ನ

ಪ್ರೀತಿಯು ಆಶ್ಚರ್ಯಕರವಾದದ್ದೇ ಸರಿ; ಅದು ಸತೀ ಪ್ರೇಮಕ್ಕಿಂತ ಶ್ರೇಷ್ಠವಾದದ್ದು. ಅಯ್ಯೋ, ಪರಾಕ್ರಮಶಾಲಿಗಳು ಹೇಗೆ ಹತರಾದರು! ಯುದ್ಧಾಯುಧಗಳು ಹೇಗೆ ಹಾಳಾದವು!

ಯೋನಾತಾನನ ಮಿತೃತ್ವದ ನೆನಪುಗಳು ದಾವೀದನಿಗೆ ಯಾವಾಗಲೂ ಅಪ್ಯಾಯಮಾನವಾಗಿದ್ದವು (2 ಸಮುವೇಲ 1:26, 27ಎ).

ನಿಷ್ಠೆಯು ಮುಂಬರುವ ಪೀಳಿಗೆಗೆ ಫಲಬಿಡುತ್ತದೆ. 20:42ರ ಮಾತುಗಳು 2 ಸಮುವೇಲ 9:1-13 ಮತ್ತು 2 ಸಮುವೇಲ 21:1-7ರಲ್ಲಿ ನೆರವೇರಿತು. ಯೋನಾತಾನನ ನಿಷ್ಠೆಯು ಆಶೀವಾರ್ದವನ್ನು ವಂಶಪಾರಂಪರ್ಯವಾಗಿ ಕೊಟ್ಟಿತು. ಸೌಲನ ಪ್ರತಿಭಟನೆಯಿಂದಾಗಿ ಉಂಟಾದ ಕುಟುಂಬದ ಅವಮಾನ ಮತ್ತು ತುಚ್ಛೀಕರಿಸಲ್ಪಟ್ಟದ್ದು, ಯೋನಾತಾನನ ನಿಷ್ಠೆಯ ಫಲವಾಗಿ ಶ್ರೇಷ್ಠವಾದ ಸ್ಥಾನಕ್ಕೆ ಏರಿಸಲ್ಪಟ್ಟಿತು.

## ಮುಕ್ತಾಯ

ಕ್ರೈಸ್ತರ ಗುಣಗಳ ಸಮೂಹವನ್ನೇ ಯೋನಾತಾನನು ಚಿತ್ರಿಸಿದನು. ಅವುಗಳಲ್ಲಿ ಪ್ರಾಮುಖ್ಯವಾದದ್ದು ನಿಷ್ಠೆ. ಅವನು ಗಿಲ್ಬೋವ ಬೆಟ್ಟದ ಯುದ್ಧಭೂಮಿಯಲ್ಲಿ ಭಯಕಂರವಾದ ಅವಸಾನವನ್ನು ಹೊಂದಿದನು. ಆದರೆ ಫಿಲಿಷ್ಟಿಯರಿಂದಾದ ಸೋಲು ಎಂದಿಗೂ ಅಳಿಸಲಾರದಂತೆ ಅವನು ತನ್ನ ಜೀವನದಲ್ಲಿ ಅತ್ಯದ್ಭುತ ಜಯವನ್ನು ಸಂಪಾದಿಸಿದನು. ಯೋನಾತಾನನು ದುಷ್ಟ ಆಶೆಗಳ ಮೇಲೆ ಜಯ ಸಾಧಿಸಿದನು. ಕೋಪ ಮತ್ತು ಹೊಟ್ಟೆಕಿಚ್ಚು ನಾಶ ಮಾಡಲಾರದ ದುರಾಶೆಯ ಮೇಲೆ ಜಯ ಸಂಪಾದಿಸಿದನು. ಅವನ ಅತ್ಯುನ್ನತ ಜಯವನ್ನು ಒಂದೇ ಪದದಲ್ಲಿ ಹೇಳುವದಾದರೆ: *ನಿಷ್ಠೆ*!

ದೇವರ ಕುರಿತಾದ ನಿನ್ನ ನಿಷ್ಠೆಯು ನಿಯಂತ್ರಣದಲ್ಲಿದೆಯೋ? ಸ್ನೇಹಿತರ ಕುರಿತಾದ ನಿನ್ನ ನಿಷ್ಠೆಯು ಸೇವೆ ಮಾಡುವ ಭಾವವುಳ್ಳದ್ದಾಗಿದೆಯೋ? ನಿನ್ನ ಕುಟುಂಬದ ಕುರಿತಾದ ನಿನ್ನ ನಿಷ್ಠೆಯು *ಕಳಕಳಿಯುಳ್ಳದ್ದಾಗಿದೆಯೋ?*